ಓ.ಎಸ್. – 41/2024

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 09.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಕೆ.ವಿ.ಪಿ ರವರಿಂದಃ–**

**1.** ನನ್ನ ತಂದೆಗೆ ಮೂರು ಜನ ಮಕ್ಕಳು. ನಾನೇ ಹಿರಿಯ ಮಗ. ಸಾಗರ ತಾಲ್ಲೂಕು, ಆವಿನಹಳ್ಳಿ ಹೋಬಳಿ, ಗಿಣಿವಾರ ಗ್ರಾಮದ ಸರ್ವೇ ನಂಬರ್ 17 ರಲ್ಲಿ 20 ಗುಂಟೆ ಜಮೀನು ಬಗರ್ ಹುಕುಂ ಸಮಿತಿಯಿಂದ ಮಂಜೂರಾಗಿತ್ತು ಎಂದರೆ ಸರಿ. ಗಿಣಿವಾರ ಗ್ರಾಮದಿಂದ ಹೊಸನಗರಕ್ಕೆ ಸಂಪರ್ಕ ಕಲ್ಪಿಸಲು ಪಟಗುಪ್ಪೆ ಸೇತುವೆ ನಿರ್ಮಿಸಿದ್ದರು ಎಂದರೆ ಸರಿ. ಪಟಗುಪ್ಪೆ ಸೇತುವೆ ಯಿಂದ ನಮ್ಮ ಮನೆಗೆ 14–15 ಕಿ.ಮೀ ದೂರ ಇದೆ. 2008 ರಲ್ಲಿ ಸಿಸಿಎಲ್ ಕನ್ಸ್ಟ್ರಕ್ಷನ್ ಲಿಮಿಟೆಡ್ ಕಂಪನಿಯವರು ಪಟಗುಪ್ಪೆ ಸೇತುವೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು ಎಂದರೆ ಸರಿ ಆ ಕೆಲಸವನ್ನು ವಾದಿಯ ಗಂಡ ಪುರಷೋತ್ತಮರವರು ಗುತ್ತಿಗೆಗೆ ಪಡೆದಿದ್ದರು ಎಂದರೆ ಸರಿ. ಆಗ ನನ್ನ ತಂದೆ ಮತ್ತು ವಾದಿಯ ಗಂಡ ಪರಿಚಯವಾಗಿದ್ದರು ಎಂದರೆ ಸರಿ. ಪುರಷೋತ್ತಮರವರು ಮಾಡಿಸುತ್ತಿದ್ದ ಪಟಗುಪ್ಪೆ ಸೇತುವೆ ಕೆಲಸಕ್ಕೆ ನನ್ನ ತಂದೆ ಸಹ ಹೋಗುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ವಾದಿ ಮತ್ತು ಅವಳ ಗಂಡ ಗಿಣಿವಾರ ಗ್ರಾಮದಲ್ಲಿ ಮನೆಯನ್ನು ಬಾಡಿಗೆಗೆ ಪಡೆದು ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಸರಿ. ಆ ಸಂದರ್ಭದಲ್ಲಿ ನನ್ನ ತಂದೆ ವಾದಿಯ ಮನೆಗೆ ಹೋಗಿ ಬರುತ್ತಿದ್ದರು ಮತ್ತು ವಾದಿ ಹಾಗೂ ಅವರ ಕುಟುಂಬದೊಂದಿಗೆ ವಿಶ್ವಾಸದಿಂದ ಇರುತ್ತಿದ್ದರು ಎಂದರೆ ಸರಿ.

**2.** 2012 ರಲ್ಲಿ ನನ್ನ ತಂದೆ ಪಡೆದಿದ್ದ ಬ್ಯಾಂಕ್ ಸಾಲವನ್ನು ವಾದಿಯ ಗಂಡ ಮರು ಪಾವತಿ ಮಾಡಿದರು ಎಂದರೆ ಸರಿಯಲ್ಲ. ಆದ ಕಾರಣ ದಾವಾ ಸ್ವತ್ತನ್ನು ನನ್ನ ತಂದೆ ವಾದಿ ಮತ್ತು ಅವಳ ಗಂಡ ವಾಸಿಸಲು ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ಮುಂದುವರೆದು ಅವರು ಬಾಡಿಗೆಗಾಗಿ ನಮ್ಮ ಮನೆಯನ್ನು ಪಡೆದು ಅದರಲ್ಲಿ ವಾಸವಾಗಿದ್ದರು ಎನ್ನುತ್ತಾರೆ. 2012 ರಲ್ಲಿ ವಾದಿ ಮತ್ತು ಅವಳ ಗಂಡ ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿದರು ಎಂದರೆ, ಸಾಕ್ಷಿಯು ಅಲ್ಲಿದ್ದ ಹೆಂಚಿನ ಮನೆಯನ್ನು ಕೆಡವಿ ಹೊಸ ಆರ್ ಸಿಸಿ ಮನೆಯನ್ನು ಕಟ್ಟಿದರು ಎನ್ನುತ್ತಾರೆ. 2012 ರಿಂದ ಸದರಿ ಹೊಸ ಮನೆಯಲ್ಲಿ ವಾದಿ ಮತ್ತು ಅವಳ ಗಂಡ ಮತ್ತು ಮಕ್ಕಳು ವಾಸವಾಗಿದ್ದಾರೆ ಎಂದರೆ ಸರಿ.

**3.** ದಿನಾಂಕ 20.03.2023 ರಂದು ನನ್ನ ತಂದೆ ದುರ್ಗಪ್ಪ ಮೃತಪಟ್ಟರು ಎಂದರೆ ಸರಿ. ನನ್ನ ತಂದೆ ಮೃತಪಟ್ಟಾಗ ಅವರ ಮಾನಸಿಕ ಆರೋಗ್ಯ ಉತ್ತಮವಾಗಿತ್ತು ಎಂದರೆ ಸರಿಯಲ್ಲ. ಮುಂದುವರೆದು

ಅವರು ಹೆಚ್ಚು ಮದ್ಯಪಾನ ಮಾಡುತ್ತಿದ್ದರು ಎನ್ನುತ್ತಾರೆ. ನನಗೆ ತಿಳಿದಂತೆ ನಾನು ದ್ವಿತೀಯ ಪಿಯುಸಿಯಲ್ಲಿ ಓದುತ್ತಿದ್ದಾಗ ಅಂದರೆ 2011–12 ನೇ ಸಾಲಿನಿಂದ ನನ್ನ ತಂದೆ ಹೆಚ್ಚು ಮದ್ಯಪಾನ ಮಾಡುತ್ತಿದ್ದರು. ನನ್ನ ತಂದೆಗೆ ಮದ್ಯಪಾನದ ಚಟವನ್ನು ಬಿಡಿಸಲು ನಾವು ಆಸ್ಪತ್ರೆಯಲ್ಲಿ ಹಾಗೂ ಇತರೆ ನಾಟಿ ಔಷಧಿಯನ್ನು ಕೊಡಿಸಿದ್ದೇವೆ. ನನ್ನ ತಂದೆಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದೇನೆ.

**4.** ನನ್ನ ತಂದೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸರಿ. ಅವರು ಮೃತ ಪಟ್ಟ 2–3 ದಿನಗಳ ನಂತರ ಫಾರೆಸ್ಟ್ ನಲ್ಲಿ ನನ್ನ ತಂದೆಯ ಮೃತ ದೇಹ ನಮಗೆ ಸಿಕ್ಕಿತು. ನನ್ನ ತಂದೆ ಮದ್ಯಪಾನ ಮಾಡುತ್ತಿದ್ದ ಕಾರಣ ಅವರ ಮಾನಸಿಕ ಆರೋಗ್ಯ ಉತ್ತಮವಾಗಿ ಇರಲಿಲ್ಲ. ಆದ್ದರಿಂದ ಅವರು ಆತ್ಮಹತ್ಯೆ ಮಾಡಿಕೊಂಡರು. ನಾನು ಮತ್ತು ನನ್ನ ತಾಯಿ ನನ್ನ ತಂದೆಗೆ ಕಿರುಕುಳ ನೀಡುತ್ತಿದ್ದ ಕಾರಣ ನನ್ನ ತಂದೆ ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸರಿಯಲ್ಲ.

**5.** ಪಿಡಬ್ಲ್ಯೂ–2 ಮತ್ತು 3 ರವರು ನನಗೆ ಗೊತ್ತು. ನಮ್ಮ ತಂದೆಗೂ ಸಹ ಅವರು ಪರಿಚಯವಿದ್ದು, ಅವರೊಂದಿಗೆ ವಿಶ್ವಾಸದಿಂದ ಇದ್ದರು. ಪಿಡಬ್ಲ್ಯೂ–2 ಮತ್ತು 3 ರವರು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ. ದಿನಾಂಕ 18.09.2017 ರಂದು ನನ್ನ ತಂದೆ ವಾದಿಯ ಹೆಸರಿಗೆ ನೊಂದಾಯಿತ ಮರಣ ಶಾಸನವನ್ನು ನಿಪಿ–1 ರಂತೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ನನ್ನ ತಂದೆ ಮದ್ಯಪಾನ ಮಾಡುತ್ತಿದ್ದ ಕಾರಣ ಮದ್ಯದ ಅಮಲಿನಲ್ಲಿ ಮರಣ ಶಾಸನವನ್ನು ಮಾಡಿರಬಹುದು ಎನ್ನುತ್ತಾರೆ. ನನ್ನ ತಂದೆ ಮೃತ ಪಡುವವರೆಗೆ ನಿಪಿ–1 ರ ಮರಣ ಶಾಸನದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.